# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ಮತ್ತು (ತಿದ್ದುಪಡಿ) ಅಧಿನಿಯಮ, 2014ರ ಅಡಿಯಲ್ಲಿ ಸಕಾಲ ಮಿಷನ್‌ನ ಲೆಕ್ಕ ಶೀರ್ಷಿಕೆ 2052-00-090-0-26-051 ಅಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ರೂ.100 ಲಕ್ಷ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 20 ಇಕಾಅ 2012, ದಿನಾಂಕ:06-03-2012
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 318 ಇಕಾಅ 2018, ದಿನಾಂಕ:23-04-2018

ಪ್ರಸ್ತಾವನೆ:

ಮೇಲೆ ಓದಲಾದ (1)ರ ಆದೇಶದಲ್ಲಿ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011ನ್ನು ಪರಿಣಾಮಕಾರಿ ಅನುಷ್ಟಾನಗೊಳಿಸಲು ಸಕಾಲ ಮಂಡಳಿಯನ್ನು ಅಧಿಕಾರಿ/ಸಿಬ್ಬಂದಿಯೊಂದಿಗೆ ರಚಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ (2)ರ ಆದೇಶದಲ್ಲಿ ಆರ್ಥಿಕ ಇಲಾಖೆಯು ಸಕಾಲ ಮಿಷನ್ ಶಾಖೆಗೆ ಲೆಕ್ಕ ಶೀರ್ಷಿಕೆಯಡಿ 2018-19ನೇ ಸಾಲಿನಲ್ಲಿ ಅನುದಾನ ಹಂಚಿಕೆ ಮಾಡಿರುವಂತೆ, 2018-19ನೇ ಸಾಲಿನಲ್ಲಿ ಮುಂದುವರಿಸಲು ಸರ್ಕಾರವು ಮಂಜೂರಾತಿಯನ್ನು ನೀಡಿದೆ.

ಸಕಾಲ ಮಿಷನ್‌ನಲ್ಲಿ ಹೊರಗುತ್ತಿಗೆ ಆದಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಮಾಸಿಕ ಸಂಭಾವನೆ, ಸಕಾಲ ಕರೆಕೇಂದ್ರದ ಮಾಸಿಕ ಸೇವಾವೆಚ್ಚ, ದೂರವಾಣಿ ಬಿಲ್ಲುಗಳು, ಕಂಪ್ಯೂಟರ್ ಹಾಗೂ ಇತರ ಪರಿಕರಗಳ ಖರೀದಿ ಖರ್ಚು ಹಾಗೂ ಮಿಷನ್‌ನ ದಿನನಿತ್ಯದ ಹಣಕಾಸಿನ ಎಲ್ಲಾ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸಲು (Imprest amount) ಇವುಗಳ ವೆಚ್ಚ ಭರಿಸಲು ಲೆಕ್ಕಶೀರ್ಷಿಕೆ 2052-00-090-0-26-051 ಅಡಿಯಲ್ಲಿ ವ್ಯವಹರಿಸಲು ರೂ 100 ಲಕ್ಷವನ್ನು ಪೀಠಾಧಿಕಾರಿ, ಸಕಾಲ ಮಿಷನ್, ಸಿಆಸುಇ (ಇ-ಆಡಳಿತ) ಇವರು ಉಪಯೋಗಿಸಲು ಈ ಮೊತ್ತವನ್ನು ಬಿಡುಗಡೆಮಾಡಲು ಸರ್ಕಾರ ನಿರ್ಧರಿಸಿದೆ ಅದರಂತೆ ಈ ಕೆಳಕಂಡ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 318 ನಾಸೇಖಾ 2018**
**ಬೆಂಗಳೂರು, ದಿನಾಂಕ:23/05/2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಸಕಾಲ ಮಿಷನ್‌ನಲ್ಲಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಮಾಸಿಕ ಸಂಭಾವನೆ, ಕರೆ ಕೇಂದ್ರದ ಮಾಸಿಕ ಸೇವಾ ವೆಚ್ಚ, ದೂರವಾಣಿ ಬಿಲ್ಲುಗಳು, ಕಂಪ್ಯೂಟರ್ ಹಾಗೂ ಇತರೆ ಪರಿಕರಗಳ ಖರೀದಿ ವೆಚ್ಚ ಹಾಗೂ ಸಕಾಲ ಮಿಷನ್‌ನ ದಿನನಿತ್ಯದ ಹಣಕಾಸಿನ ಎಲ್ಲಾ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸಲು ಇವುಗಳ ವೆಚ್ಚ ಭರಿಸಲು ಲೆಕ್ಕ ಶೀರ್ಷಿಕೆ "2052-00-090-0-26-051 ಅಡಿಯಲ್ಲಿ ವ್ಯವಹರಿಸಲು ರೂ.100 ಲಕ್ಷಗಳ ಅನುದಾನವನ್ನು ಪೀಠಾಧಿಕಾರಿ, ಸಕಾಲ ಮಿಷನ್, ಸಿಆಸುಇ (ಇ-ಆಡಳಿತ) ಸಕಾಲ ಮಿಷನ್,

ಇವರು ನಿಯಮಾನುಸಾರ ಉಪಯೋಗಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಆಡಳಿತಾಧಿಕಾರಿ, ಸಕಾಲ ಮಿಷನ್‌ರವರು ಮೇಲುರುಜು (Counter Sign) ಪ್ರಾಧಿಕಾರ ಅಧಿಕಾರಿಯಾಗಿರುತ್ತಾರೆ.

ಮೇಲಿನ ವೆಚ್ಚವನ್ನು 2018–19ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2052–00–090–0–26–051 ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ಅನುಷ್ಠಾನದಡಿ ಒದಗಿಸಲಾದ ಅನುದಾನದಲ್ಲಿ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 02 ಟಿಎಫ್‌ಪಿ 2018, ಬೆಂಗಳೂರು, ದಿನಾಂಕ:03ನೇ ಏಪ್ರಿಲ್ 2018ರಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಮಥಾಯಿ, ಕ.ಆ.ಸೇ.,) 25/5
"ಆಡಳಿತಾಧಿಕಾರಿ,
ಸಕಾಲ ಮಿಷನ್,
O/C ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸಕಾಲ)".

ಇವರಿಗೆ:

1. ಕರ್ನಾಟಕ ಮಹಾಲೇಖಪಾಲರು, (ಲೆಕ್ಕ ಮತ್ತು ಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ.
3. ಸರ್ಕಾದ ಪ್ರಧಾನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ 1 ಮತ್ತು 2)
4. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಡಾ:ಅಂಬೇಡ್ಕರ್ ವೀದಿ, ಬೆಂಗಳೂರು.
5. ಉಪ ನಿರ್ದೇಶಕರು, ಟ.ಎನ್.ಎಂ.ಸಿ.ಖನಿಜ ಭವನೆ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
6. ಅಪರ ಮಿಷನ್ ನಿರ್ದೇಶಕರು, ಸಕಾಲ ಮಿಷನ್ ಬೆಂಗಳೂರು.
7. ಆಡಳಿತಾಧಿಕಾರಿ, ಸಕಾಲ ಮಿಷನ್.
8. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಕಡತ.

ಪ್ರತಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಆಸುಇ (ಇ–ಆಡಳಿತ) ಹಾಗೂ ನಿರ್ದೇಶಕರು, ಸಕಾಲ ಮಿಷನ್ ರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು